# ಕನ್ನಡದ ಕಟ್ಟಾಳು: ಫಕೀರಪ್ಪ ಹಳಕಟ್ಟಿಯವರು

**ಸುರೇಶ ಪಿ ನಡೋಣಿ**

ಕನ್ನಡ ಸಹಾಯಕ ಪ್ರಾಧ್ಯಾಪಕರು, ಎಸ್.ಟಿ.ಸಿ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಬನಹಟ್ಟಿ.

DOI: https://doi.org/10.5281/zenodo.17297646

## ABSTRACT:

ಈ ನೆಲದ ಇತಿಹಾಸವನ್ನು ಸಾಮಾಜಿಕ ಬೆಳವಣಿಗೆಯ ದೃಷ್ಟಿಯಿಂದ ಅಧ್ಯಯನ ಮಾಡುವ ಮಹತ್ವದ ಕಾರ್ಯದಲ್ಲಿ ಲಿಖಿತ ದಾಖಲೆಯಾದ ಸಾಹಿತ್ಯದ ಒಳನೋಟಗಳು ಅಪಾರ ನೆರವು ನೀಡುತ್ತವೆ. ಹಾಗೆಯೇ ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕನಗೈದಾಗ ಆಯಾ ಕಾಲದ ಸಾಮಾಜಿಕ ಸನ್ನಿವೇಶದಲ್ಲಿ ನಡೆಯುವ ಸಂಘರ್ಷಗಳ ಅಭಿವ್ಯಕ್ತಿಯಾಗಿ ಅಧ್ಯಯನ ಮಾಡುತ್ತಿರುವುದು ಕೂಡ ವಾಸ್ತವದಲ್ಲಿ ಕಂಡುಬರುತ್ತದೆ. ಇದಕ್ಕೆ ಹನ್ನೆರಡನೇ ಶತಮಾನದ ಶರಣರ ವಚನ ಘಟ್ಟವು ಕೂಡ ಹೊರತಾಗಿಲ್ಲ. ವಚನ ಸಾಹಿತ್ಯದ ಸುಗ್ಗಿಯ ಕಾಲದಲ್ಲಿ ಮೈಮುರಿದು ಎದ್ದ ಸಾಮಾಜಿಕ ಆಂದೋಲನವು ಅಂದಿನ ಸಮಾಜಕ್ಕೆ ಹೊಸ ತಿರುವು ಹಾಗೂ ಅರಿವನ್ನು ತಂದುಕೊಟ್ಟಿತು. ವಚನ ಸಾಹಿತ್ಯವು ಜಾಗತಿಕ ಮೌಲ್ಯಗಳನ್ನು ಒಳಗೊಂಡಿದೆ. ಇದು ಜಾತಿ, ಮತ, ಧರ್ಮವನ್ನು ಮೀರಿದ್ದು, ಸಮಾನತೆ ಸಾರುವ ಏಕೈಕ ಸಂವಿಧಾನ. ಇಂತಹ ಹಿರಿಮೆ, ಗರಿಮೆ ಹೊಂದಿರುವ ವಚನ ಸಾಹಿತ್ಯವು ಭಾಷೆ, ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯ, ಆಚಾರ-ವಿಚಾರಗಳನ್ನು ಒತ್ತಟ್ಟಿಗೆ ನೋಡಿದಾಗ ಹೊಸತನದ ಬೆಳಕಿನ ಪ್ರಭಾವಳಿ ಎಲ್ಲೆಡೆಯಲ್ಲಿ ಹರಡಿದ್ದನ್ನು ವಚನ ಪಿತಾಮಹ ಫ.ಗು. ಹಳಕಟ್ಟಿಯವರು ತಮ್ಮ ಶಿವಾನುಭವ, ನವಕರ್ನಾಟಕ ಪತ್ರಿಕೆಗಳ ಮೂಲಕ, ಗ್ರಂಥ ಸಂಪಾದನೆಗಳ ಮೂಲಕ ಕಟ್ಟಿಕೊಟ್ಟಿದ್ದನ್ನು ಕಾಣಬಹುದು.

## KEYWORDS:

ಸಂಪಾದನೆ, ಶಾಸನ, ರಗಳೆ, ಕಾವ್ಯಸಂಪಾದನೆ, ಪತ್ರಿಕೆ, ಅಷ್ಟಾವರಣಗಳು, ಷಟ್‌ಸ್ಥಲ

### ಪ್ರವೇಶ:

ಹನ್ನೆರಡನೇ ಶತಮಾನದ ನಂತರ ವಚನ ಸಾಹಿತ್ಯಕ್ಕೆ ಮರುಜೀವವನ್ನು ತಂದುಕೊಟ್ಟ ಕೀರ್ತಿಯು ಫಕೀರಪ್ಪ ಗುರುಬಸಪ್ಪ ಹಳಕಟ್ಟಿಯವರಿಗೆ ಸಲ್ಲುವುದು. ಅಂದಿನ ಶಿವಶರಣ-ಶರಣೆಯರ ವಚನ ಸಾಹಿತ್ಯವನ್ನು ಬೆಳಕಿಗೆ ತಂದು ಧರ್ಮದ ಒರೆಗಲ್ಲಿಗೆ ತಾಗಿಸಿ ಕಂಪನ್ನು ನಾಡಿನೆಲ್ಲೆಡೆ ಪಸರಿಸಿದರು. ಸಂಘ-ಸಂಸ್ಥೆಗಳು, ಸರಕಾರಗಳು ಮಾಡಬೇಕಾಗಿದ್ದ ಕೆಲಸವನ್ನು ಒಬ್ಬ ವ್ಯಕ್ತಿ ಹಾಗೂ ಶಕ್ತಿಯಾಗಿ ಕಾಯಕಗೈದು ವಚನ ಗುಮ್ಮಟರಾದರು. ಹಾಗೆಯೇ ಇವರ ಕಾರ್ಯಕ್ಷೇತ್ರವು ಕೇವಲ ವಚನ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿರದೇ ಶಿಕ್ಷಣ, ಪತ್ರಿಕೋದ್ಯಮ, ಸಹಕಾರ, ಧರ್ಮ, ಆರ್ಥಿಕತೆ ಹೀಗೆ ಹತ್ತಾರು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಸಂಘ-ಸಂಸ್ಥೆಗಳನ್ನು ಸ್ಥಾಪಿಸಿ ಸಾಮಾಜಿಕ, ಧಾರ್ಮಿಕ ಮೌಲ್ಯಗಳಡಿಯಲ್ಲಿ ಆಲದ ಮರದಂತೆ ಬೆಳೆದು ಹೆಮ್ಮರವಾದರು.

### ಫ.ಗು. ಹಳಕಟ್ಟಿಯವರ ಬಾಲ್ಯ ಮತ್ತು ಜೀವನ ಜೀವನ :

ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಪ್ರಸಿದ್ಧಿ ಹೊಂದಿದ ಧಾರವಾಡದ ಲಿಂಗಾಯತ ನೇಕಾರ ಸಮಾಜಕ್ಕೆ ಸೇರಿದ ಹಳಕಟ್ಟಿ ಕುಟುಂಬದ ಮೇಧಾವಿ ಗುರುಬಸಪ್ಪ -

ದಾನಮ್ಮ ದಂಪತಿಗಳ ಉದರದಿಂದ 1880 ಜುಲೈ 2 ರಂದು ಇವರು ಜನಿಸಿದರು. ಮಗುವಿಗೆ ಫಕೀರಪ್ಪ ಎಂದು ನಾಮಕರಣ ಮಾಡಿದರು. ತಾಯಿ ದಾನಮ್ಮ ಫಕೀರಪ್ಪನನ್ನು ಹೆತ್ತ ಮೂರೇ ವರ್ಷಗಳಲ್ಲಿ ಅಂದರೆ ದಿನಾಂಕ 3–6–1883 ರಂದು ತೀರಿಕೊಂಡರು. ಬಳಿಕ ಮಗುವನ್ನು ಸಾಕಿ ಸಲುಹಿದವಳು ತಾಯಿಯ ತಾಯಿ ಬಸಮ್ಮ. ಅಜ್ಜಿಯ ಮಡಿಲ ಕರುಣೆ ಫಕೀರಪ್ಪನ ವಿಕಾಸಕ್ಕೆ ಒತ್ತಾಸೆಯಾಯಿತು. ಫಕೀರಪ್ಪನ ತಂದೆ ಗುರುಬಸಪ್ಪನಿಗೆ ತನ್ನ ಮಗ ಎಲ್ಲ ರೀತಿಯಿಂದ ಸಮರ್ಥ ವ್ಯಕ್ತಿಯಾಗಿ, ಆದರ್ಶ ನಾಗರಿಕನಾಗಿ ಹೊರಹೊಮ್ಮಬೇಕು; ನಾಡಿನ ಸಾಹಿತ್ಯ, ಸಂಸ್ಕೃತಿಗಳನ್ನು ಆಳವಾಗಿ ಅಭ್ಯಸಿಸಬೇಕು, ಸಾಮಾಜಿಕ, ಧಾರ್ಮಿಕ ವಿಷಯಗಳನ್ನು ಅರಿತು ಬಾಳುವಂತಾಗಬೇಕೆನ್ನುವ ಉತ್ಕಟ ಹಂಬಲವಿತ್ತು.

ಹೀಗಾಗಿ ಮಗನ ಬೆಳವಣಿಗೆ ಬಗ್ಗೆ ಸ್ವತಃ ಮುತುವರ್ಜಿ ವಹಿಸಿ ಶಿಕ್ಷಣ ಕೊಡಲು ಮುಂದಾದರು. ಫಕೀರಪ್ಪನ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಧಾರವಾಡದಲ್ಲಿ ನಡೆಯಿತು. 1890 ರಿಂದ 1896 ರ ವರೆಗೆ ಫಕೀರಪ್ಪ ಹೈಸ್ಕೂಲ್ ಶಿಕ್ಷಣಕ್ಕೆ ಅಡಿ ಇಟ್ಟರು. ಮುಂದೆ 1896 ರಲ್ಲಿ ಮ್ಯಾಟ್ರಿಕ್ಯುಲೇಶನ್ ಪಾಸಾದರು. 1902 ರಲ್ಲಿ ಬಿ.ಎ. ಪರೀಕ್ಷೆಯನ್ನು ಉತ್ತಮ ಶ್ರೇಣಿಯಲ್ಲಿ ಪಾಸುಮಾಡಿಕೊಂಡರು. ಫಕೀರಪ್ಪ ಬಿ.ಎ. ಪರೀಕ್ಷೆಯ ನಂತರ ಎಂ.ಎ. ಹಾಗೂ ಎಲ್.ಎಲ್.ಬಿ. ಎರಡೂ ಪರೀಕ್ಷೆಗಳಿಗೆ ಅಭ್ಯಾಸ ನಡೆಸಿದರೂ 1904 ರಲ್ಲಿ ಕೇವಲ ಎಲ್.ಎಲ್.ಬಿ. ಪರೀಕ್ಷೆಯೊಂದನ್ನೇ ಮಾತ್ರ ಪಾಸುಮಾಡಿಕೊಂಡರು. ತಂದೆ ಗುರುಬಸಪ್ಪನವರ ಪ್ರೇರಣೆ – ಪ್ರೋತ್ಸಾಹ, ಮಾವ ತಮ್ಮಣ್ಣಪ್ಪ ಚಿಕ್ಕೋಡಿಯವರ ಮಾರ್ಗದರ್ಶನ, ಮುಂಬಯಿ ಕಾಲೇಜಿನ ಅಧ್ಯಾಪಕರ ಉತ್ತಮ ಬೋಧನೆ, ಅಲ್ಲಿಯ ಪರಿಸರ – ಇವೆಲ್ಲವುಗಳ ಸದುಪಯೋಗ ಪಡೆದುಕೊಂಡು ಒಬ್ಬ ಮಹತ್ವಾಕಾಂಕ್ಷಿ ವ್ಯಕ್ತಿಯಾಗಿ ರೂಪುಗೊಂಡರು.

ಫ.ಗು. ಹಳಕಟ್ಟಿಯವರ ವಿವಾಹವು ಭಾಗೀರಥಿದೇವಿ ಜೊತೆಯಲ್ಲಿ ದಿನಾಂಕ 7.2.1896 ರಂದು ಬನಹಟ್ಟಿಯಲ್ಲಿ ಜರುಗಿತು. ಆಗ ಹಳಕಟ್ಟಿಯವರ ವಯಸ್ಸು ಕೇವಲ ಹದಿನಾರು. ಅದೇ ತಾನೇ ಅವರು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸಾಗಿದ್ದರು. ವಿಜಾಪುರ ಜಿಲ್ಲೆಯ ಬನಹಟ್ಟಿ ಭಾಗೀರಥಿದೇವಿಯ ತವರು ಮನೆ. ಇಲ್ಲಿಯ ಚಿಕ್ಕೋಡಿ ಮನೆತನದ ತಮ್ಮಣ್ಣಪ್ಪ ಮತ್ತು ಗಂಗವ್ವ ಎಂಬ ದಂಪತಿಗಳು ಭಾಗೀರಥಿದೇವಿಯ ತಂದೆ ತಾಯಿಗಳು. ಭಾಗೀರಥಿದೇವಿಯ ತಂದೆ ತಮ್ಮಣ್ಣಪ್ಪ ಚಿಕ್ಕೋಡಿಯವರು ಸಾಮಾನ್ಯ ವ್ಯಕ್ತಿಗಳಲ್ಲ. ಅವರೂ ಸಾಹಿತಿಗಳು, ಸಮಾಜಸೇವಾ ಧುರೀಣರು, ಉಜ್ವಲ ರಾಷ್ಟ್ರಭಕ್ತರೆಂದು ಹೆಸರಾಗಿದ್ದರು. ಫ.ಗು. ಹಳಕಟ್ಟಿ ಮತ್ತು ಭಾಗೀರಥಿದೇವಿಯವರಿಗೆ ಏಳು ಜನ ಮಕ್ಕಳು. ಅವರಲ್ಲಿ ನಾಲ್ಕು ಜನ ಗಂಡು, ಮೂರು ಜನ ಹೆಣ್ಣು. 1. ಮಹಾಲಿಂಗ (1903) 2. ಚಂದ್ರಶೇಖರ (1906) 3. ಗುರುಪುತ್ರಪ್ಪ 4. ಶಿವಶಂಕರ 5. ಸರಸ್ವತಿ 6. ಪಾರ್ವತಿ 7. ಸಾವಿತ್ರಿ.

ಈ ಏಳು ಜನ ಮಕ್ಕಳಲ್ಲಿ ಚಂದ್ರಶೇಖರ, ಗುರುಪುತ್ರಪ್ಪ ಮತ್ತು ಪಾರ್ವತಿದೇವಿ ಅವರನ್ನು ಹೊರತುಪಡಿಸಿ ಉಳಿದವರು ಮದುವೆ ವಯಸ್ಸಿಗೆ ಬರುವ ಪೂರ್ವದಲ್ಲಿಯೇ ತೀರಿಕೊಂಡರು. ಇದೇ ರೀತಿ ಮಕ್ಕಳ ಶಿಕ್ಷಣ ವಿಷಯದಲ್ಲಿಯೂ ಬಹು ಕಾಳಜಿ ಹೊಂದಿದ್ದರು. ಪ್ರಗತಿಪರ ವಿಚಾರವಾದಿಗಳಾಗಿದ್ದ ಅವರು ಮಕ್ಕಳಿಗೆ ಸರಿಯಾದ ಶಿಕ್ಷಣ ದೊರೆಯುವಂತೆ ಯೋಜಿಸಿದ್ದರು. ಹಿರಿಯ ಮಗ ಚಂದ್ರಶೇಖರನಿಗೆ ಎಫ್.ವೈ. ಪರೀಕ್ಷೆಯಾದ ಮೇಲೆ ಮುಂಬಯಿ ವಿಕ್ಟೋರಿಯಾ ಟೆಕ್ನಿಕಲ್ ಇನ್ಸ್ಟಿಟ್ಯೂಟ್‌ನಲ್ಲಿ ನೇಕಾರಿಕೆಯ ಬಗ್ಗೆ ತಾಂತ್ರಿಕ ಶಿಕ್ಷಣ ಕಲಿಯಲು ಕಳುಹಿಸಿಕೊಟ್ಟಿದ್ದರು. 1933 ರಲ್ಲಿ ಉನ್ನತ ಶಿಕ್ಷಣಕ್ಕಾಗಿ ಇಂಗ್ಲೇಂಡಿನ ಮ್ಯಾಂಚೆಸ್ಟರ್ ವಿಶ್ವವಿದ್ಯಾಲಯದಲ್ಲಿ ಸೇರಿಸಿದ್ದರು. 1938 ರಲ್ಲಿ ಸ್ವದೇಶಕ್ಕೆ ಬಂದ ಚಂದ್ರಶೇಖರ ಉತ್ತಮ ಸರಕಾರಿ ನೌಕರಿ ಹೊಂದಿದ್ದರು. ಇನ್ನೊಬ್ಬ ಮಗ ಗುರುಪುತ್ರಪ್ಪ ಅಂತರಾಷ್ಟ್ರೀಯ ಕ್ರಿಕೆಟ್

ಪಟುವಾಗಿದ್ದನು. ಹೆಣ್ಣುಮಕ್ಕಳಿಗೂ ಅವರು ಶಿಕ್ಷಣ ಕೊಡಿಸಿ ಮದುವೆ ಮಾಡಿಕೊಟ್ಟರು. ಫ. ಗು. ಹಳಕಟ್ಟಿಯವರ ಧರ್ಮಪತ್ನಿ ಭಾಗೀರಥಿದೇವಿ ದಿನಾಂಕ 25.5.1964 ರಂದು ಸ್ವರ್ಗಸ್ಥರಾದರು. ತಮ್ಮ ಕೌಟುಂಬಿಕ ಜೀವನದಲ್ಲಿ ಹಲವಾರು ಅನಿರೀಕ್ಷಿತ ಆಘಾತಗಳನ್ನು ಅನುಭವಿಸಿದ ಹಳಕಟ್ಟಿಯವರಿಗೆ ತಮ್ಮ ಸಹಧರ್ಮಿಣಿ ಅಗಲಿದ್ದು ಬಹು ದೊಡ್ಡ ಆಘಾತವನ್ನುಂಟು ಮಾಡಿತು. ಇದೆಲ್ಲವನ್ನು ಮೌನವಾಗಿ ಸ್ಥಿತಪ್ರಜ್ಞೆಯಿಂದ ತಾಳಿಕೊಂಡು 84 ವರ್ಷ ತುಂಬುತ್ತಿರುವಾಗಲೇ ಹಣ್ಣಾದ ಹಳಕಟ್ಟಿಯವರು ದಿನಾಂಕ 29.6.1964 ರಂದು ಸೋಮವಾರ ಸಂಜೆ ಏಳು ಗಂಟೆಗೆ ನಿಧನರಾದರು. ಡಾ. ಹಳಕಟ್ಟಿಯವರು ಕೊನೆಯವರೆಗೂ ಬಾಡಿಗೆಯ ಮನೆಯಲ್ಲಿಯೇ ಇರಬೇಕಾಯಿತು. ಕೊನೆಯಲ್ಲಿ ಮಾತ್ರ ಬಾಡಿಗೆಯಿಲ್ಲದ ಮನೆ ಸಿಕ್ಕಿತು, ಎಂದು ಹಿರಿಯ ಸಾಹಿತಿ ಸಿಂಪಿ ಲಿಂಗಣ್ಣನವರು ಹೇಳಿದ ಮಾತು ಅತ್ಯಂತ ಧ್ವನಿಪೂರ್ಣವಾಗಿದೆ.

**ಫ.ಗು. ಹಳಕಟ್ಟಿಯವರ ಸಾಹಿತ್ಯಿಕ ಸಾಧನೆ :**

ಕರ್ನಾಟಕದ ಮ್ಯಾಕ್ಸ್‌ಮುಲ್ಲರ್ ಎಂಬ ಕೀರ್ತಿಗೆ ಭಾಜನರಾದ ಹಳಕಟ್ಟಿಯವರು ಶರಣರ ಜೀವನ ಮೌಲ್ಯಗಳನ್ನು, ಕಾಲಾತೀತವಾದ ಕಾಲ ಗರ್ಭದಲ್ಲಿ ಹುದುಗಿ ಹೋಗಿದ್ದ ವಚನ ಸಾಹಿತ್ಯವೆಂಬ ಅನರ್ಘ್ಯ ರತ್ನವನ್ನು ಶೋಧಿಸಿ, ಅನ್ವೇಷಿಸಿ, ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ ಸಂಶೋಧನಾ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಒಂದು ವೇಳೆ ಶರಣ ಸಾಹಿತ್ಯದ ಕಡೆಗೆ ಲಕ್ಷ್ಯ ಹರಿಸದೇ ಇದ್ದರೆ ಇಂದು ನಮಗೆ ಶಿವಶರಣರ ವಚನಗಳು ದೊರಕುತ್ತಿರಲಿಲ್ಲ. ಕತ್ತಲ ಕಾಲಗರ್ಭದಲ್ಲಿದ್ದ ವಚನಗಳನ್ನು ಒಬ್ಬ ವಕೀಲರಾಗಿದ್ದುಕೊಂಡು ಶರಣರ ತತ್ವಾದರ್ಶಗಳು ಅವರೊಳಗಿದ್ದ ವೈಚಾರಿಕ ಮಾನವ ಪ್ರಜ್ಞೆಯನ್ನು ಎತ್ತಿ ತೋರಿಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಪತ್ರಿಕೆಗಳ ಸಂಪಾದಕ, ಮುದ್ರಕ ಹಾಗೂ ಪ್ರಕಾಶಕರಾಗಿ ಸಲ್ಲಿಸಿದ ಸೇವೆ ಇಂದಿಗೂ ಎಂದೆಂದಿಗೂ ಪ್ರಸ್ತುತವಾಗಿದೆ. ಇಂತಹ ಮಹಾನುಭಾವರು 'ಶಿವಾನುಭವ', 'ನವಕರ್ನಾಟಕ' ಪತ್ರಿಕೆಯ ಮೂಲಕ ವಚನ, ರಗಳೆ, ಶಾಸನ ಸಾಹಿತ್ಯ, ಚರಿತ್ರೆ ಮುಂತಾದವುಗಳನ್ನು ಸಂಪಾದಿಸಿ ಪ್ರಕಟಿಸಿ ನಾಡಿನ ತುಂಬೆಲ್ಲಾ ಸಾಹಿತ್ಯಿಕ ವಾತಾವರಣವನ್ನು ನಿರ್ಮಿಸಿದರು. ಅವುಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು.

**ಸಂಪಾದನಾ ಸಾಹಿತ್ಯ :**

- ವಚನ ಸಂಪಾದನೆ – ಅಮುಗೆದೇವನ ವಚನಗಳು, ಉರಿಲಿಂಗಪೆದ್ದಿ ವಚನಗಳು, ಪದ ಮಂತ್ರಗೋಪ್ಯ, ಬೋಳೆ ಬಸವೇಶ್ವರ ವಚನಗಳು, ಮೊಳಗೆ ಮಾರಯ್ಯನ ವಚನಗಳು, ಶಿವಶರಣರ ಸಂಕೀರ್ಣ ವಚನಗಳು, ಸ್ಫಟಿಕ, ಏಕೋತ್ತರ ಸ್ಥಲಗಳು, ಐವತ್ತು ತರದ ಆಚಾರಗಳು.
- ಶಾಸನ ಸಂಪಾದನೆ – ಅಗರಖೇಡ ಶಿಲಾಶಾಸನ, ಅಮುಗೆದೇವ ಶಿಲಾಶಾಸನ, ಏಕಾಂತ ಮತ್ತು ಅಬಲೂರು ಶಾಸನ, ವೀರ ಬನಂಜು ಶಾಸನ, ಶ್ರೀ ಸಿದ್ಧರಾಮೇಶ್ವರ ಸಂಗೂರು ಶಾಸನ.
- ರಗಳೆ ಸಂಪಾದನೆ – ತೋಂಟದಾರ್ಯ ರಗಳೆ, ವೀರಶೈವ ರಗಳೆ, ಹರಿಹರ ರಗಳೆಗಳು, ಮುಂತಾದವುಗಳು.
- ಕಾವ್ಯ ಸಂಪಾದನೆ – ಈಶೋಪನಿಷತ್ತುಗಳು, ದೇವರ ದಾಸಿಮಯ್ಯಾಚಾರ್ಯನ ಕಥೆ, ನೂರೊಂದು ಹಾಡುಗಳು, ಮುಂತಾದವುಗಳು.

- ಪತ್ರಿಕಾ ಸಂಪಾದನೆ – ನವ ಕರ್ನಾಟಕ, ಶಿವಾನುಭವ ಪತ್ರಿಕೆಗಳು.
- ಷಟ್‌ಸ್ಥಲಗಳು – ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯ.
- ಅಷ್ಟಾವರಣಗಳು – ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪಾದೋದಕ ಮತ್ತು ಪ್ರಸಾದ.

**ಸಾಮಾಜಿಕ ಸೇವೆ :**

ಹನ್ನೆರಡನೇ ಶತಮಾನದ ನಂತರ ವಚನ ಸಾಹಿತ್ಯಕ್ಕೆ ಮರುಜೀವವನ್ನು ತಂದುಕೊಟ್ಟ ಕೀರ್ತಿಯು ಫಕೀರಪ್ಪ ಗುರುಬಸಪ್ಪ ಹಳಕಟ್ಟಿಯವರಿಗೆ ಸಲ್ಲುವುದು. ಅಂದಿನ ಶಿವಶರಣ–ಶರಣೆಯರ ವಚನ ಸಾಹಿತ್ಯವನ್ನು ಬೆಳಕಿಗೆ ತಂದು ಧರ್ಮದ ಒರೆಗಲ್ಲಿಗೆ ತಾಗಿಸಿ ಕಂಪನ್ನು ನಾಡಿನೆಲ್ಲೆಡೆ ಪಸರಿಸಿದರು. ಸಂಘ–ಸಂಸ್ಥೆಗಳು, ಸರಕಾರಗಳು ಮಾಡಬೇಕಾಗಿದ್ದ ಕೆಲಸವನ್ನು ಒಬ್ಬ ವ್ಯಕ್ತಿ ಹಾಗೂ ಶಕ್ತಿಯಾಗಿ ಕಾಯಕಗೈದು ವಚನ ಗುಮ್ಮಟರಾದರು. ಹಾಗೆಯೇ ಇವರ ಕಾರ್ಯಕ್ಷೇತ್ರವು ಕೇವಲ ವಚನ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿರದೇ ಶಿಕ್ಷಣ, ಪತ್ರಿಕೋದ್ಯಮ, ಸಹಕಾರ, ಧರ್ಮ, ಆರ್ಥಿಕತೆ ಹೀಗೆ ಹತ್ತಾರು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಸಂಘ–ಸಂಸ್ಥೆಗಳನ್ನು ಸ್ಥಾಪಿಸಿ ಸಾಮಾಜಿಕ, ಧಾರ್ಮಿಕ ಮೌಲ್ಯಗಳಡಿಯಲ್ಲಿ ಆಲದ ಮರದಂತೆ ಬೆಳೆದು ಹೆಮ್ಮರವಾದರು.

**ಸಮಾರೋಪ :**

ಶ್ರೀಯುತ ಫ.ಗು. ಹಳಕಟ್ಟಿಯವರ ಜೀವನ ಸಾಧನೆ, ಬದುಕು–ಬರಹ, ಸಾಹಿತ್ಯ ಕೃತಿಗಳ ಬಗೆಗೆ ನಾಡಿನ ಅನೇಕ ವಿದ್ವಾಂಸರು, ಪಂಡಿತರು ವಿವಿಧ ಆಯಾಮಗಳಲ್ಲಿ ಸಂಶೋಧನೆ, ವಿಮರ್ಶೆಗಳನ್ನು ತಕ್ಕಮಟ್ಟಿಗೆ ನಡೆಸಿದ್ದಾರೆ. ಆದರೆ ಫ.ಗು. ಹಳಕಟ್ಟಿಯವರನ್ನು ಒಳಗೊಂಡಂತೆ ಅವರ ಶಿವಾನುಭವ ಪತ್ರಿಕೆಯನ್ನು ಕುರಿತು ಅದರೊಳಗೆ ಮಿಳಿತಗೊಂಡ ಕೆಲವು ಸಾಹಿತ್ಯಿಕ, ಪಾರಂಪರಿಕ ತಿರುಳುಗಳನ್ನು ಕಂಡುಕೊಳ್ಳುವಲ್ಲಿ ಪ್ರಸ್ತುತ ಲೇಖನವು ಪ್ರಾಮಾಣಿಕವಾಗಿ ಪ್ರಮಾಣೀಕರಿಸಲ್ಪಟ್ಟಿದೆ. ಹಳಕಟ್ಟಿಯವರು ಬಾಳಿದ ರೀತಿಯನ್ನು ಅದು ಅರ್ಥವತ್ತಾಗಿ ಬಿಂಬಿಸುತ್ತದೆ. ಫ.ಗು. ಹಳಕಟ್ಟಿಯವರು ನಾಡಿನ ಕಲ್ಯಾಣಕ್ಕಾಗಿ, ಸಾರ್ವಜನಿಕ ಹಿತಕ್ಕಾಗಿ ಎಂದೂ ಕ್ಷೀಣಿಸದ ಅಪಾರವಾದ ಆಸ್ತಿಯನ್ನು ಸಂಪಾದಿಸಿದರು. ಹತ್ತು ಹಲವಾರು ಸಂಘ ಸಂಸ್ಥೆಗಳನ್ನು ಸ್ಥಾಪಿಸಿ, ಶೈಕ್ಷಣಿಕ ಕಟ್ಟಡಗಳನ್ನು, ಮಂಗಲಕಾರ್ಯಾಲಯಗಳನ್ನು, ಸಭಾಭವನಗಳನ್ನು ಕಟ್ಟಿಸಿದರು. ವಚನಾಮೃತವನ್ನು ನಾಡಿನ ಜನತೆಗೆ ಉಣಬಡಿಸಿದರು. ಆದರೆ ತಮ್ಮ ಕುಟುಂಬಕ್ಕೆ ತಲೆ ಮೇಲೆ ನೆರಳಿಗೆಂದು ಒಂದು ಚಪ್ಪರವನ್ನು ಹಾಕಿಕೊಳ್ಳಲಿಲ್ಲ. ಬಾಡಿಗೆ ಮನೆಯಲ್ಲಿಯೇ ಜೀವನ ಕಳೆದು, ತಮ್ಮ ಸ್ವಂತಕ್ಕಾಗಿ ಗೇಣು ನೆಲ, ಹಿಡಿ ಆಸ್ತಿ ಏನೊಂದನ್ನು ಗಳಿಸದೆ 'ಫಕೀರಪ್ಪ'ರಾಗಿ ತಮ್ಮ ಅಂಕಿತನಾಮವನ್ನು ಅನ್ವರ್ಥಕವಾಗಿಸಿಕೊಂಡರು.

**ಪರಾಮರ್ಶನ ಗ್ರಂಥಗಳು:**


1. ಪಾಟೀಲ ಬಿ.ಎಂ., (2023) ಬಸವ ಲೋಕ, ದ್ವೈಮಾಸಿಕ ಪತ್ರಿಕೆ, ಸಂಪುಟ 11. ಸಂಚಿಕೆ 3. ಪ್ರ. ಫ.ಗು. ಹಳಕಟ್ಟಿ ಟ್ರಸ್ಟ್ ರಯಬಾಗ ರಸ್ತೆ, ನಾಗರಾಳ.
2. ಪಾಟೀಲ ಬಿ.ಎಂ., (2006) ವಚನ ಗುಮ್ಮಟ. ಪ್ರ. ಹಿತಚಿಂತಕ ಪ್ರಕಾಶನ, ಮಹಾಲಿಂಗಪುರ.
3. ರಾಠೋಡ ಪಂಡಿತ., (2014) ಫ.ಗು. ಹಳಕಟ್ಟಿಯವರ ಪತ್ರಿಕಾ ಸಾಹಿತ್ಯ. ಪ್ರ. ಶುಭಚಂದ್ರ ಪ್ರಕಾಶನ ಧಾರವಾಡ.
4. ನಂದೀಮಠ ಎಸ್.ಸಿ., (1964) ವಚನ ಪಿತಾಮಹರು ಕಣ್ಮರೆಯಾದರು, (ಸಂ) ವೀರಶೈವ, ಸಂಪಾದಕೀಯ. ಸಂ 5.
5. ಸಂಕನಾಳ ಯಲಗುರೇಶ., ವಚನಪಿತಾಮಹ ರಾವ್ ಬಹದ್ದೂರ ಡಾ. ಫ.ಗು. ಹಳಕಟ್ಟಿ, ಶರಣ ಪತ್ರಿಕೆ, ಸಂ.23, ಸಂ. 3, ಪುಟ 120–124.
6. ಗುಂಜಾಳ್ ಶಿವಪುತ್ರಪ್ಪ., (1980) ವಚನಶಾಸ್ತ್ರ ಪಿತಾಮಹ ಶರಣ ಫ.ಗು. ಹಳಕಟ್ಟಿ, ಕಲ್ಯಾಣ ಕಿರಣ, ಸಂ.6.
7. ವಚನ ಪಿತಾಮಹರನ್ನು ನೆನೆದು, ಸಂಪಾದಕರು, ಶಿವಾನುಭವ (ಬಸವತತ್ವ ಪ್ರಚಾರಸಮಿತಿ ಧಾರವಾಡ), ಸಂ. 11, ಸಂ.5–6.
8. ಮಾಳವಾಡ ಸ.ಸ., (1980) ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ, ಉದಯ ಸುವರ್ಣಮಹೋತ್ಸವ ಸ್ಮರಣ ಸಂಚಿಕೆ.
9. ಬಡಿಗಣ್ಣವರು ಸದಾಶಿವ ವಿ., (1980) ವಚನ ಪಿತಾಮಹ ಡಾ. ಹಳಕಟ್ಟಿಯವರು, ಶರಣ ಪತ್ರಿಕೆ, ಸಂ. 6, ಸಂ. 4.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.


**About the License:**


© The Authors 2024. The text of this article is open access and licensed under a Creative Commons Attribution 4.0 International License.